ವಿಚಾರ ಲಹರಿ

# ಪದ ಮತ್ತು ಪದ್ಧತಿ

ಭಾರತ ಹಿಂದೂ ರಾಷ್ಟ್ರ 'ಭಾರತದಲ್ಲಿರುವವರೆಲ್ಲರೂ ಹಿಂದೂಗಳು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥರು ಫರಮಾನು ಹೊರಡಿಸಿದ್ದಾರೆ. ಅಮೆರಿಕಾದಲ್ಲಿರುವವರೆಲ್ಲರೂ ಅಮೆರಿಕನ್ನರು, ಜರ್ಮನಿಯಲ್ಲಿರುವವರೆಲ್ಲರೂ ಜರ್ಮನರು ಇತ್ಯಾದಿ ದೇಶ– ದೇಶೀಯತೆಯ ಸಮೀಕರಣವನ್ನು ತಾವೇ ಮುಂದಿಟ್ಟು ಈ ಹೇಳಿಕೆಯನ್ನು ಸಮರ್ಥಿಸುತ್ತಾರೆ. ಇಲ್ಲಿ ಮೇಲ್ನೋಟಕ್ಕೆ ಸಹಜ ಜ್ಞಾನ (Common sense) ಕೈಕೊಟ್ಟಿರುವುದು ಎದ್ದು ಕಾಣುತ್ತದೆ. ಯಾಕೆಂದರೆ ಆ ಹೇಳಿಕೆಯಲ್ಲಿಯೆ ಭಾರತದಲ್ಲಿ ಇರುವವರೆಲ್ಲರೂ ಭಾರತೀಯರು ಎಂದು ಒಪ್ಪಿಕೊಂಡಂತಾಗುತ್ತದೆ. ಅದಿರಲಿ, ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಹಿಂದೂ ಎಂಬ ಧರ್ಮವೊಂದರ ಅನನ್ಯತೆಯನ್ನು, ಪಾವಿತ್ರ್ಯವನ್ನು ಇವರು ಯಾಕೆ ಅಲ್ಲಗಳೆಯುತ್ತಿದ್ದಾರೆ ಎಂಬುದು. ಧರ್ಮಕ್ಕೆ ತನ್ನದೇ ಆದ ದೇವರು(ಗಳು) ಆಚಾರ– ವಿಚಾರ, ನಡವಳಿಕೆ, ಆರಾಧನೆ, ಪೂಜೆ, ಪ್ರಾರ್ಥನೆ ಎಲ್ಲವೂ ನಿರ್ದಿಷ್ಟ ಚೌಕಟ್ಟಿನೊಳಗೆ ಇರುತ್ತವೆ ಮತ್ತು ಅವುಗಳು ಆಯಾ ಧರ್ಮಾವಲಂಬಿಗಳಿಂದ ಪರಿಪಾಲಿಸಲ್ಪಡುತ್ತವೆ. ಹಾಗೆ ಪಾಲಿಸಲೊಲ್ಲದ ವ್ಯಕ್ತಿ ತಾನು ಹಿಂದೂ ಎಂದು ಕರೆದುಕೊಂಡಾಗ ಆಗುವ ಪ್ರಯೋಜನವಾದರೂ ಏನು? ಹಾಗೇನಾದರೂ ಸಂಭವಿಸಿಬಿಟ್ಟರೆ ಕಾಲಾಂತರದಲ್ಲಿ ಆ ಧರ್ಮವೇ ಮುಖಹೀನವಾಗಿ ಬಿಡುವುದಿಲ್ಲವೆ? ಹಿಂದುತ್ವ ಎಂಬುದು ಧಾರ್ಮಿಕ ಪರಿಕಲ್ಪನೆ ಅಲ್ಲ ಎನ್ನುವುದಾದರೆ ಬಹು ಪ್ರಾಚೀನವಾದ, ಸನಾತನ ಎನ್ನಿಸಿಕೊಳ್ಳುವ ಧರ್ಮದ ಅಸ್ತಿತ್ವವನ್ನೆ' ಅಲ್ಲಗಳೆದಂತಾಗುತ್ತದೆ. ಅದನ್ನು ಸಾಂಸ್ಕೃತಿಕ ಅನನ್ಯತೆ ಎಂದೂ ಸಮರ್ಥಿಸಲಾಗುವುದಿಲ್ಲ. ಯಾಕೆಂದರೆ, ದಕ್ಷಿಣದ ರಾಮೇಶ್ವರದ ಬ್ರಾಹ್ಮಣನಿಗೂ ಉತ್ತರದ ಕಾಶಿಯ ಬ್ರಾಹ್ಮಣನಿಗೂ ಇರುವುದು ಒಂದೇ ಸಂಸ್ಕೃತಿಯಲ್ಲ. ಕೇರಳದ ಮುಸಲ್ಮಾನನ ಸಂಸ್ಕೃತಿ ಬಂಗಾಲದ ಮುಸಲ್ಮಾನನಿಗೆ ಹೊಂದಿಕೆಯಾಗದು. ಹಾಗಾಗಿ ಇದೊಂದು ಹಾದಿ ತಪ್ಪಿಸುವ ಅಪ್ಪಟ ಕರ್ಮಠ ವ್ಯಾಖ್ಯಾನ ಎನ್ನದೆ ಬೇರೆ ದಾರಿಯಿಲ್ಲ.

ಒಬ್ಬ ಮುಸಲ್ಮಾನ, ಒಬ್ಬ ಕ್ರೈಸ್ತ ತನ್ನ ಧರ್ಮವನ್ನು ಇತರ ಯಾವ ಹೆಸರಿನಿಂದಲೂ ಕರೆಯಲು ಇಚ್ಛಿಸಲಾರ. ಅದು ಅವನಿಗೆ ಧರ್ಮ ದ್ರೋಹ ಎನಿಸುತ್ತದೆ. ದೇವರನ್ನು ವ್ಯಕ್ತೀಕರಿಸುವುದು ಧರ್ಮದ್ರೋಹ (Personification of God is blasphemy) ಎನ್ನುತ್ತಾನೆ ಫ್ರ್ಯಾನ್ಸಿಸ್ ಬೇಕನ್. ದೇವರ ಮಗ ಅಥವಾ ದೇವರ ಸೇವಕ ಯಾರನ್ನೇ ಆದರೂ ಧರ್ಮಗ್ರಂಥ ನಿರ್ದೇಶಿತ ಹೆಸರಿನಿಂದಲೇ ಕರೆಯಬೇಕು. ಬೇರೆ ಯಾವ ಹೆಸರಿನಿಂದ ಕರೆದರೂ ಅವರು ಸಹಿಸಲಾರರು. ಹೀಗಿರುವಾಗ ಹಿಂದೂ ಸಂಪ್ರದಾಯವಾದಿಗಳು ಯಾಕಿಷ್ಟು ಉದಾರವಾದಿಗಳಾಗುತ್ತಾರೆ. ಇದೇ ತರ್ಕವನ್ನು ಅನ್ವಯಿಸಿದರೆ ಅಮೆರಿಕದಲ್ಲಿರುವ ಭಾರತೀಯರು ಪ್ರಾಟೆಸ್ಟೆಂಟ್ ಹಿಂದೂ, ಜರ್ಮನಿಯಲ್ಲಿರುವವರು ಕ್ಯಾಥೊಲಿಕ್ ಹಿಂದೂ, ಜಪಾನಿನಲ್ಲಿ ಬೌದ್ಧ ಹಿಂದೂ ಎಂದು ಕರೆದುಕೊಳ್ಳಬೇಕಾಗುತ್ತದೆ.

ಪ್ರಪಂಚದ ಎಲ್ಲೆಡೆ ಎಲ್ಲ ನಂಬಿಕಸ್ಥ ಧರ್ಮೀಯರು ತಮ್ಮ ಧರ್ಮದ ಪದ್ಧತಿಯ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಾರೆಯೆ ಹೊರತು ಪದದ ಬಗ್ಗೆ ಅಲ್ಲ. ಪದ ಅವರಿಗೆ ಶುದ್ಧಾಂಗವಾಗಿ ಗ್ರಂಥೀಯ, ದೈವನಿರ್ದೇಶಿತ. ಆದರೆ ಭಾರತದಲ್ಲಿ ಕೆಲವರಿಗೆ ಹಿಂದೂ ಎಂಬ ಪದದ ಬಗ್ಗೆ ವ್ಯಾಮೋಹವಿದೆ. ಕಾರಣ ಸ್ಪಷ್ಟವಾಗಿದೆ. ಅದು ಜಾತಿ ಪದ್ಧತಿ. ಜಾತಿ, ಧರ್ಮವನ್ನು ಮಸುಕು ಮಾಡಿಬಿಡುತ್ತದೆ. ಹಿಂದೂಸ್ತಾನದಲ್ಲಿ ವ್ಯಕ್ತಿಯ ಮೂಲ ಅನನ್ಯತೆ (Identity) ಜಾತಿಯೆ. ಇಲ್ಲಿ ಇಬ್ಬರು ಹಿಂದೂ ವ್ಯಕ್ತಿಗಳು ಸಂಧಿಸಿದಾಗ ಅವರ ಮೊದಲ ಕುತೂಹಲ ಎದುರಿಗಿರುವಾತ ಯಾವ ಜಾತಿಯವನಿರಬಹುದು ಎಂಬುದಾಗಿರುತ್ತದೆ. ಆದ್ದರಿಂದ ಹಿಂದೂ ಎಂಬ ಪದವನ್ನು ಜಾತಿಯನ್ನು ಮರೆಸುವ ಅಥವಾ ಮರೆಮಾಚುವ ಸಾಧನವನ್ನಾಗಿಯೂ ಬಳಸಬಹುದು. ಹಾಗಾದಲ್ಲಿ ಇದೊಂದು ಸಕಾರಾತ್ಮಕ ಪ್ರಯತ್ನವೆ! ಇನ್ನೊಂದು ಮಗ್ಗುಲಿನಿಂದ ನೋಡಿದಾಗ ಇದು ಮುಸ್ಲಿಮರು ಮತ್ತು ಕ್ರೈಸ್ತರನ್ನು ಜಾತಿಯ ಮಟ್ಟಕ್ಕೆ ಇಳಿಸಿಬಿಡಬಹುದು. ಆಗ ಅವರು ತಮ್ಮ ಹೆಸರಿನ ಮುಂದೆ ಹಿಂದೂ ಎಂದು ಬರೆದು ಕಂಸದಲ್ಲಿ ಮುಸಲ್ಮಾನ ಅಥವಾ ಕ್ರೈಸ್ತ ಎಂದು ನಮೂದಿಸಬೇಕಾಗುತ್ತದೆ. ಆದರೆ ಈ ಸೆಮೆಟಿಕ್ ಧರ್ಮಗಳು ವಿಶ್ವವ್ಯಾಪಿಯಾಗಿರುವುದರಿಂದ ಅವುಗಳ ಅನನ್ಯತೆಗೆ ಧಕ್ಕೆ ಮಾಡುವುದು ಅಷ್ಟು ಸುಲಭವಲ್ಲ. ಹಿಂದೂ– ಲಿಂಗಾಯತ ಎಂದು ಕರೆಯುವಷ್ಟು ಸರಳವೂ ಅಲ್ಲ. ದೇಶದ ಸಾಂಸ್ಕೃತಿಕ ಚರಿತ್ರೆಯ ನೇಗಿಲ ಮೇಟಿ ಹಿಡಿಯಬಯಸುವವರು ಇವೆಲ್ಲ ಒಳ ಸೂಕ್ಷ್ಮಗಳನ್ನು ಗಮನಿಸುವುದು ಒಳ್ಳೆಯದೆನಿಸುತ್ತದೆ.

ಇನ್ನೊಂದು ವಿಚಾರ; ದಕ್ಷಿಣ ಅಮೆರಿಕಾದ ಸ್ಪ್ಯಾನಿಷ್ ಮಾತನಾಡುವ ಕೆಲವು ದೇಶಗಳಲ್ಲಿ ಭಾರತೀಯರನ್ನು ಹಿಂದೂ ಎಂತಲೇ ಗುರುತಿಸಲಾಗುತ್ತದೆ. ಕೆಲವು ವರ್ಷಗಳ ಹಿಂದೆ ವೆನೆಜುಯೇಲಾ ದೇಶದ ಆಂಡೀಸ್ ವಿಶ್ವವಿದ್ಯಾಲಯದಲ್ಲಿ ನಡೆದ ಕಾವ್ಯವಾಚನದ ಆಮಂತ್ರಣ ಪತ್ರಿಕೆಯಲ್ಲಿ ನನ್ನ ಹೆಸರಿನ ಮುಂದೆ poeta hindu ಎಂದು ಬರೆಯಲಾಗಿತ್ತು. ನನ್ನ ಅನುವಾದಕಿಯನ್ನು ಕೇಳಲಾಗಿ ಅದನ್ನು Indian poet ಎಂದು ಓದಿಕೊಳ್ಳಬೇಕೆಂದು ಹೇಳಿದರು. ಸಂಘ ಪರಿವಾರದ ಈ ವಿಚಾರಧಾರೆ ಈಗಾಗಲೇ ಕೆಲವು ಕಡೆ ಚಾಲ್ತಿಯಲ್ಲಿದೆ ಎಂದು ತಿಳಿದರೆ ಅದರ ಅನುಯಾಯಿಗಳಿಗೆ ಖುಷಿಯಾಗಬಹುದು.

■ ಮೂಚಿ

## ಮಾತೇ ಮುತ್ತು

★ ಅಮೃತಕ್ಕೆ ಹಸಿವುಂಟೆ? ಜಲಕ್ಕೆ ತೃಷೆಯುಂಟೆ? ಮಹಾಜ್ಞಾನಿ ನಿತ್ಯಸ್ವರೂಪಂಗೆ ವಿಷಯವುಂಟೆ?

-ಉರಿಲಿಂಗ ಪೆದ್ದಿ

★ ಬಂದದ್ದೆಲ್ಲ ಬರಲಿ, ಹೋಗುವುದೆಲ್ಲ ಹೋಗಲಿ. ಉಳಿದದ್ದು ಏನೆಂದು ನೋಡಿ.

-ರಮಣ ಮಹರ್ಷಿ

★ ವ್ಯಕ್ತಿತ್ವ ವಿಕಸನ ತನ್ನಿಂದತಾನೇ ಸುಮ್ಮನೆ ಆಗುವುದಿಲ್ಲ. ಕಠಿಣ ಪರೀಕ್ಷೆ ಮತ್ತು ಸಂಕಷ್ಟಗಳನ್ನು ಎದುರಿಸುವ ಮೂಲಕವೇ ಆತ್ಮವು ಗಟ್ಟಿಗೊಂಡು ಯಶಸ್ಸು ಸಾಧ್ಯವಾಗುತ್ತದೆ.

-ಹೆಲೆನ್ ಕೆಲರ್

★ ಆಕಾಶದತ್ತ ನೋಡಿ, ನಾವು ಏಕಾಂಗಿಯಲ್ಲ. ಇಡೀ ವಿಶ್ವ ನಮ್ಮತ್ತ ಸ್ನೇಹಮಯಿಯಾಗಿದೆ. ಕನಸು ಕಾಣುವವರಿಗೆ ಅತ್ಯುತ್ತಮವಾದುದನ್ನು ನೀಡಲು ಸಿದ್ಧವಾಗಿದೆ.

-ಎ.ಪಿ.ಜೆ.ಅಬ್ದುಲ್ ಕಲಾಮ್

★ ಮನೆಯೊಂದನ್ನು ನಿರ್ವಹಿಸುವ ಕಷ್ಟ ಗೊತ್ತಿರುವ ಯಾವುದೇ ಮಹಿಳೆಗೆ ದೇಶವನ್ನು ನಡೆಸುವ ಕಷ್ಟಗಳು ಗೊತ್ತಿರುತ್ತವೆ.

-ಮಾರ್ಗರೆಟ್ ಥ್ಯಾಚರ್

ನಾವು ಯಾರಿಗೂ ಏನೂ ಆಗದೆ ಇರುವುದು ಜಗತ್ತಿನ ಬಹುದೊಡ್ಡ ರೋಗ.

-ಮದರ್ ತೆರೀಸಾ

★ ನಾವು ಸರಳವಾಗಿ ನಮ್ಮದೇ ಆದ ಬೇರೆ ದಾರಿಯಲ್ಲಿ ಹೊರಟರೆ, ಜನರು ಈಕೆ ತಪ್ಪು ದಾರಿ ಹಿಡಿದಿದ್ದಾಳೆ ಎನ್ನುತ್ತಾರೆ.

-ಏಂಜಲಿನಾ ಜೋಲಿ

★ ಅಸಾಧ್ಯ ಎನ್ನುವುದು ವಾಸ್ತವವಲ್ಲ; ಅದೊಂದು ಅಭಿಪ್ರಾಯ ಅಷ್ಟೆ.

-ಡೇವಿಡ್ ಬೆಕ್ಹಾಮ್

★ ಭಯವನ್ನು ನೇರವಾಗಿ ಸಂಪರ್ಕಿಸಿ, ವೀಕ್ಷಿಸಿ. ಅದರ ಬಗ್ಗೆ ಕಲಿತುಕೊಳ್ಳಿ. ಅದರಿಂದ ತಪ್ಪಿಸಿಕೊಳ್ಳುವುದನ್ನು ಕಲಿಯುವುದಲ್ಲ.

-ಜಿಡ್ಡು ಕೃಷ್ಣಮೂರ್ತಿ

★ ಶ್ರೇಷ್ಠ ವಿಚಾರಗಳೆಲ್ಲವೂ ಸರಳ ಮತ್ತು ಅವುಗಳನ್ನು ಒಂದೇ ಶಬ್ದದಲ್ಲಿ ಹೇಳಬಹುದು– ಸ್ವಾತಂತ್ರ್ಯ, ನ್ಯಾಯ, ಗೌರವ, ಕರ್ತವ್ಯ, ಕರುಣೆ, ಭರವಸೆ ಇತ್ಯಾದಿ.

-ವಿನ್‌ಸ್ಟನ್ ಚರ್ಚಿಲ್

★ ಯಾವಾಗ ಸಾಧ್ಯವಿದೆಯೋ ಆವಾಗೆಲ್ಲ ಕರುಣಾಮಯಿ ಆಗಿರಿ. ಅದು ನಿಮ್ಮಿಂದ ಸದಾ ಕಾಲ ಸಾಧ್ಯವಿದೆ.

-ದಲೈ ಲಾಮಾ

★ ಬುದ್ಧನ ಕಥೆ ಹೇಳುವಂತೆ ಈ ಭೂಮಿಯಿಂದ ಅಗತ್ಯವಾದದ್ದಷ್ಟನ್ನು ಆಯ್ದು ಅನುಭವಿಸುವ ಜನ ನಾವಾಗಬೇಕು.

-ಯು.ಆರ್.ಅನಂತಮೂರ್ತಿ